Ref.No.22/2023

WW-1,

**ದಿನಾಂಕಃ 25.06.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ- 2 ನೇ ಪಾರ್ಟಿ ಪರವಾಗಿಃ ಶ್ರೀ.VKS ವಕೀಲರಿಂದ**

ದಿಃ23.06.2019 ರಂದು ನಾನು ವಾಹನ ಸಂಖ್ಯೆ ಕೆಎ-19-ಎಫ್-3406 ಚಾಲಕನಾಗಿ ಕರ್ತವ್ಯ ನಿರ್ವಹಿಸುತ್ತಿರಬೇಕಾದರೆ, ಮಂಗಳೂರಿನಲ್ಲಿ ತನಿಖಾಧಿಕಾರಿಗಳು ತನಿಖೆ ಒಳಪಡಿಸಿದಾಗ, ವೈಯುಕ್ತಿಕ ದೃಢೀಕರಿಸಲ್ಪಟ್ಟ ರೂ.40/- ಸ್ವಂತ ಹಣವನ್ನು ಹೊಂದಿರುತ್ತೇನೆ ಹಾಗೂ ರೂ.310/- ಅನಧಿಕೃತ ಹಣವನ್ನು ಹೊಂದಿರುತ್ತೇನೆ ಎಂದು ಅಪಾದಿಸಿರುತ್ತಾರೆ ಎಂದರೆ ಸರಿ. ಸದರಿ ಅಪಾದನೆಯ ಬಾಬ್ತು ದೋ.ಪಟ್ಟಿಯನ್ನು ನೀಡಲಾಗಿರುತ್ತದೆ ಎಂದರೆ ಸರಿ. ಸದರಿ ದೋ.ಪಟ್ಟಿಗೆ ನಾನು ದಿಃ27.06.2019 ರಂದು ನನ್ನ ಆಕ್ಷೇಪಣೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ದಿಃ14.08.2019 ರಂದು ಪ್ರಾಥಮಿಕ ತನಿಖೆಯನ್ನು ನಡೆಸಲಾಗಿರುತ್ತದೆ ಎಂದರೆ ಸರಿ. ಹಾಗೂ ಆ ತನಿಖೆಯಲ್ಲಿ ಭಾಗವಹಿಸಿದ್ದಕ್ಕೆ ನಾನು ನಿಎಂ-13 ಮತ್ತು 14 ಕ್ಕೆ ಸಹಿ ಹಾಕಿರುತ್ತೇನೆ ಎಂದರೆ ಸರಿ. ನಾನು ತನಿಖೆಯಲ್ಲಿ ಭಾಗವಹಿಸಿದ ಬಗ್ಗೆ ನಿಎಂ-15 ಆದೇಶಪುಟಕ್ಕೂ ಸಹಿ ಹಾಕಿರುತ್ತೇನೆ ಎಂದರೆ ಸರಿ, ಸಾಕ್ಷಿಯೂ ಮುಂದುವರೆದು ತನಿಖೆಗೆ ಕರೆದು ಸಹಿಗಳನ್ನು ಪಡೆದುಕೊಂಡಿರುತ್ತಾರೆ, ಆದರೆ ಯಾವ ಯಾವ ದಾಖಲೆಗೆ ಸಹಿ ತೆಗೆದುಕೊಂಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನಿಎಂ-13 ರಲ್ಲಿ ದೋ.ಪಟ್ಟಿಯಲ್ಲಿ ನಮೂದಿಸಿರುವ ಆಪಾದನೆಗಳು ನಿಜವಾಗಿರುತ್ತವೆ ಎಂದು ಹಾಗೂ ಯಾವುದೇ ಒತ್ತಡವಿಲ್ಲದೇ ಒಪ್ಪಿಕೊಂಡಿರುತ್ತೇನೆ ಎಂದು ನಮೂದಿಸಿ, ಅದರಲ್ಲಿ ನನ್ನ ಮೇಲೆ ನನ್ನ ಸಹಿಯನ್ನು ಪಡೆಯಲಾಗಿದೆ ಎಂದರೆ ಸರಿಯಲ್ಲ. ನಿಎಂ-14 ರಲ್ಲಿ ನನ್ನಿಂದ ಸ್ವ ಹೇಳಿಕೆಯನ್ನು ಪಡೆದುಕೊಂಡು, ನನ್ನ ಸಹಿಯನ್ನು ಪಡೆಯಲಾಗಿದೆ ಎಂದರೆ ಸರಿಯಲ್ಲ. ನಿಎಂ-15 ಆದೇಶಪತ್ರದಲ್ಲಿಯೂ ಕೂಡ ಸ್ವಹೇಳಿಕೆಯ ಬಗ್ಗೆ ನಮೂದು ಮಾಡಿ, ನನ್ನ ಸಹಿಯನ್ನು ಪಡೆಯಲಾಗಿದೆ ಎಂದರೆ ನನಗೆ ಗೊತ್ತಿಲ್ಲ.

2010 ರಿಂದ 2019 ರವರೆಗೆ ಈ ಪ್ರಕರಣವಲ್ಲದೆ, ಬೇರೆ 10 ಪ್ರಕರಣಗಳು ನನ್ನ ಮೇಲೆ ಇದ್ದು, ಅವುಗಳ ಪೈಕಿ 9 ಪ್ರಕರಣಗಳಲ್ಲಿ ನನ್ನ ಮೇಲೆ ಶಿಕ್ಷೆ ವಿಧಿಸಲಾಗಿರುತ್ತದೆ ಎಂಬ ಸೂಚನೆಗೆ, ಸಾಕ್ಷಿಯು ದಂಡ

Ref.No.22/2023

WW-1,

ವಿಧಿಸಿ ಪ್ರಕರಣವನ್ನು ಮುಚ್ಚಿ ಹಾಕಲಾಗಿರುತ್ತದೆ ಎಂದು ನುಡಿಯುತ್ತಾರೆ.

ತಪಾಸಣೆ ನಡೆಸಿದ ನಂತರ ನೀಡಿದ ಜ್ಞಾಪನ ಪತ್ರ ನಿಎಂ-3 ಕ್ಕೆ ನಾನು ಸಹಿ ಹಾಕಿರುತ್ತೇನೆ ಎಂದರೆ ಸರಿ. ದಿಃ21.06.2019 ರಂದು ನಾನು ಬೆಳಿಗ್ಗೆ 7.00 ಗಂಟೆಗೆ ಕರ್ತವ್ಯಕ್ಕೆ ಹಾಜರಾಗಿದ್ದು, ಮಂಗುಳೂರಿನಿಂದ ಮೈಸೂರು ಮಾರ್ಗವಾಗಿ ಬೆಂಗಳೂರಿಗೆ ಹೋಗಿರುತ್ತೇನೆ. ನಂತರ ದಿಃ22.06.2019 ರ ಬೆಳಿಗ್ಗೆ 5.30 ಕ್ಕೆ ಬೆಂಗಳೂರನ್ನು ಬಿಟ್ಟು ಸಂಜೆ 5.30 ಕ್ಕೆ ಮಂಗಳೂರು ತಲುಪಿರುತ್ತೇನೆ. ದಿಃ21.06.2019 ರಂದು ಬೆಳಿಗ್ಗೆ 6.00 ಗಂಟೆಗೆ ನಾನು ವೈದ್ಯಾಧಿಕಾರಿಗಳ ಬಳಿ ಹೋಗಿರುತ್ತೇನೆ ಮತ್ತು ವೈದ್ಯಾಧಿಕಾರಿಗಳು ನನ್ನನ್ನು ಪರೀಕ್ಷಿಸಿ ನನಗೆ ತಲೆನೋವು ಮತ್ತು ಹಲ್ಲು ನೋವಿಗೆ ಮಾತ್ರೆ ನೀಡಿರುತ್ತಾರೆ. ವಿಚಾರಣಾಧಿಕಾರಿಗಳು ವಿಚಾರಣೆಗೆ ಬರುವಂತೆ ನೋಟಿಸ್ ನೀಡಿದ ಮೇರೆಗೆ ನಾನು ವಿಚಾರಣೆಗೆ ಹಾಜರಾಗಿರುತ್ತೇನೆ ಎಂದರೆ ಸರಿ. ವಿಚಾರಣೆಗೆ ನಾನು ನಿವೃತ್ತ ಸರ್ಕಾರಿ ಅಭಿಯೋಜಕರಾದ ಉದಯ ಕುಮಾರ್, ರವರ ಮುಂದೆ ಹಾಜರಾಗಿರುತ್ತೇನೆ ಎಂದರೆ ಸರಿ. ತನಿಖಾಧಿಕಾರಿಗಳು ನನಗೆ ವಿಚಾರಣೆಗೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳನ್ನು ನೀಡಿರುವುದಿಲ್ಲ ಎಂದರೆ ಸರಿ. ವಿಚಾರಣಾ ಕಾಲಕ್ಕೆ ನಾನು ವಿಚಾರಣೆಗೆ ಸಂಬಂಧಿಸಿದ ದಾಖಲಾತಿಗಳು ನನಗೆ ತಲುಪಿವೆ ಹಾಗೂ ನಾನು ಅವುಗಳನ್ನು ಪರಿಶೀಲಿಸಿರುತ್ತೇನೆ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮೇಲೆ ಮಾಡಿದ ಆಪಾದನೆಯನ್ನು ನಾನು ಒಪ್ಪಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನನಗೆ ಕೊಡಬೇಕಾದ ಎಲ್ಲಾ ಅವಕಾಶಗಳನ್ನು ನೀಡಿ ತನಿಖಾಧಿಕಾರಿಗಳು ತನಿಖಾದೇಶವನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ಸಂಧ್ಯಾ ರಾವ್ ಪಿ.),
ಅಧ್ಯಕ್ಷಾಧಿಕಾರಿಗಳು,
ಔದ್ಯಮಿಕ ನ್ಯಾಯಾಧೀಕರಣ,
ಮೈಸೂರು.